

ಕುಸ್ತಿ ಪಟು ಸಾಕ್ಷಿ ಮಲ್ಲಿಕ್

ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಕ್ರೀಡೆಯತ್ತ ಅಷ್ಟಾಗಿ ಸುಳಿಯದ ಸಿನೆಮಾ (ಬಾಲಿವುಡ್) ತಾರೆಯರೂ ಈ ಪ್ರೀಮಿಯರ್ ಲೀಗ್‌ಗಳಲ್ಲಿ ದುಡ್ಡು ಹೂಡಿಕೆ ಶುರು ಮಾಡಿದ್ದಾರೆ. ಅದೇ ರೀತಿ ಕ್ರಿಕೆಟ್ ತಾರೆಗಳಾದ ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿ ಅಂತಹವರೂ ಫುಟ್‌ಬಾಲ್, ಫುಟ್‌ಸಾಲ್ ಮತ್ತು ಬ್ಯಾಡ್ಮಿಂಟನ್‌ಗಳಲ್ಲಿ ಫ್ರ್ಯಾಂಚೈಸ್‌ಗಳ ಸಹ ಮಾಲೀಕರಾಗಿದ್ದಾರೆ.

ಆದರೆ, ಬೇರೆಲ್ಲ ಆಟಗಳ ಲೀಗ್‌ಗಳಿಗಿಂತಲೂ ಐಪಿಎಲ್ ಮಾತ್ರ ದಶಕ ಕಳೆದರೂ ಜನಪ್ರಿಯತೆಯ ತುತ್ತತುದಿಯಲ್ಲಿದೆ. ಅದಕ್ಕೆ ಕಾರಣವೆಂದರೆ ಹೆಸರೇ ಕೇಳದ ಎಷ್ಟೋ ಕ್ರಿಕೆಟ್‌ಗರನ್ನೂ ತಾರೆಗಳನ್ನಾಗಿ ರೂಪಿಸಿ, ಕೋಟ್ಯಧೀಶರನ್ನಾಗಿ ಮಾಡುವ ತಾಕತ್ತು ಈ ಲೀಗ್‌ಗೆ ಬಂದಿರುವುದು. ಹೋದ ವರ್ಷದ ಹರಾಜು ಪ್ರಕ್ರಿಯೆಯಲ್ಲಿ ಹೈದರಾಬಾದಿನ ಆಟೋ ಡ್ರೈವರ್ ಮಗ ಸಿರಾಜ್ ಅಹಮದ್ ₹ 2 ಕೋಟಿ ಪಡೆದಿದ್ದರು! ರಾತೋರಾತ್ರಿ ಅವರ ಜೀವನವೇ ಬದಲಾಗಿ ಹೋಗಿತ್ತು. ಈ ಬಾರಿಯ ಐಪಿಎಲ್ ಹರಾಜಿನಲ್ಲಿ ನೇಪಾಳದ ಆಟಗಾರ ಸಂದೀಪ್ ಲಮಚಾನೆ ₹ 20 ಲಕ್ಷಕ್ಕೆ ಖರೀದಿಯಾದರು. ಅಲ್ಲದೇ ರಾಜಸ್ಥಾನ್ ರಾಯಲ್ಸ್ ತಂಡವು ಶ್ರೀಮಂತ ಉದ್ಯಮಿ ಕುಮಾರಮಂಗಲಂ ಬಿರ್ಲಾ ಅವರ ಮಗ ಆರ್ಯಮನ್ ಬಿರ್ಲಾ ಅವರನ್ನೂ ₹ 20 ಲಕ್ಷ ನೀಡಿ ಖರೀದಿಸಿದ್ದು ಕೂಡ ವಿಶೇಷ. ಇದು ಐಪಿಎಲ್ ಟೂರ್ನಿಯ ಆಕರ್ಷಣೆ ಎಂತಹುದು ಎನ್ನುವುದನ್ನು ತೋರಿಸುತ್ತದೆ.

ಲಲಿತ್ ಮೋದಿಯ ಹಗರಣ, ಸ್ಪಾಟ್ ಫಿಕ್ಸಿಂಗ್ ಕಳಂಕಗಳಿದ್ದರೂ ಐಪಿಎಲ್ ಆಕರ್ಷಣೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಪ್ರಾಯೋಜಕ ಸಂಸ್ಥೆಗಳು ಮುಗಿ ಬೀಳುತ್ತಿವೆ. ಟ್ವೆಂಟಿ–20 ಕ್ರಿಕೆಟ್ ಮಾದರಿಯನ್ನು ಚಿನ್ನದ ಗಣಿಯನ್ನಾಗಿ ಸೃಷ್ಟಿಸಿದ ಶ್ರೇಯ ಐಪಿಎಲ್‌ಗೆ ಸಲ್ಲಬೇಕು. ಅದರ ಪ್ರಭಾವ ಎಷ್ಟಿದೆಯೆಂದರೆ ಸಣ್ಣಪುಟ್ಟ ಊರುಗಳಲ್ಲಿಯೂ ಲೀಗ್ ಕ್ರಿಕೆಟ್ ಟೂರ್ನಿ ನಡೆಯುತ್ತಿವೆ.

ಮುಂಬೈ ಪ್ರೀಮಿಯರ್ ಲೀಗ್, ಹುಬ್ಬಳ್ಳಿ ಪ್ರೀಮಿಯರ್ ಲೀಗ್, ಕರ್ನಾಟಕ ಪ್ರೀಮಿಯರ್ ಲೀಗ್‌ಗಳಲ್ಲಿ ಹತ್ತು ಸಾವಿರದಿಂದ 50 ಸಾವಿರದವರೆಗೆ ಆಟಗಾರರು ಹಣ ಪಡೆಯುವಂತಾಗಿದೆ. ಸ್ಥಳೀಯ ಆಟಗಾರರು ಅವಕಾಶ ಗಿಟ್ಟಿಸುತ್ತಿದ್ದಾರೆ. ಆಸ್ಟ್ರೇಲಿಯಾದಲ್ಲಿ ಬಿಗ್ ಬ್ಯಾಷ್ ಲೀಗ್ ಕೂಡ ಜನಪ್ರಿಯಗೊಂಡಿದೆ.

ಫುಟ್‌ಬಾಲ್‌ನಲ್ಲಿ ಇಂಡಿಯನ್ ಸೂಪರ್ ಲೀಗ್ ಮತ್ತು ಐ ಲೀಗ್‌ಗಳು ಜನಪ್ರಿಯಗೊಂಡಿವೆ. ಆದರೆ ಇಲ್ಲಿಯ ಲೆಕ್ಕಾಚಾರ ಲಕ್ಷಗಳಲ್ಲಿ ಮಾತ್ರ ಇದೆ. ಆಟಗಾರರು ಕೂಡ ಕೋಟಿಯ ಗಡಿ ದಾಟಿಲ್ಲ. ಆದರೆ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ 17 ಕೋಟಿ ಪಡೆದಿದ್ದಾರೆ. ಕನ್ನಡಿಗ ಕೆ.ಎಲ್. ರಾಹುಲ್ ₹ 11 ಕೋಟಿ ಪಡೆದಿದ್ದಾರೆ. ಒಲಿಂಪಿಕ್ ಪದಕ ವಿಜೇತ ಬ್ಯಾಡ್ಮಿಂಟನ್ ಆಟಗಾರ್ತಿಯರಾದ ಸೈನಾ ನೆಹ್ವಾಲ್ ಮತ್ತು ಪಿ.ವಿ. ಸಿಂಧು ಅವರಿಗೆ ಪ್ರೊ ಬ್ಯಾಡ್ಮಿಂಟನ್ ಲೀಗ್‌ನಲ್ಲಿ ಇಷ್ಟೊಂದು ಹಣ ಸಿಕ್ಕಿಲ್ಲ. ಆದರೆ ಪ್ರೊ ಕಬಡ್ಡಿಯಿಂದಾಗಿ ಗ್ರಾಮೀಣ ಮಟ್ಟಕ್ಕೆ ಉಳಿದಿದ್ದ ಆಟಗಾರರು ಇವತ್ತು ನಗರದ ಬೀದಿಗಳಲ್ಲಿಯೂ ಜನಪ್ರಿಯತೆ ಪಡೆದಿದ್ದಾರೆ. ಅವರೊಂದಿಗೆ ಸೆಲ್ಫಿ ತೆಗೆಸಿಕೊಂಡು ಆಟೋಗ್ರಾಫ್ ಪಡೆಯುವ ಅಭಿಮಾನಿಗಳು ಇದ್ದಾರೆ.

